## ಕಳೆದ ಸಂಚಿಕೆಯಲ್ಲಿ



ತನ್ನ ಪೂರ್ವಿಕರು ವೈಭವದಿಂದ ಬಾಳಿದ, ಅಪ್ಪನ ನೆನಪುಗಳುಳ್ಳ ಮನೆಯನ್ನು ನೋಡಿ ಸಂಜಯ ಭಾವುಕನಾದ. ಊರಿನ ಕಡಿದುಹೋದ ತಂತುಗಳು ಅವನ ಭಾವಕೋಶದೊಳಗೆ ಸೇರಿಕೊಳ್ಳತೊಡಗಿದವು. ಅದೇ ಸಮಯಕ್ಕೆ ಊರಿಗೆ ಬಂದ ಸಂಜಯನನ್ನು ನೋಡಿ ಆನಂದಣ್ಣ ಮತ್ತು ಶೆಟ್ಟರು ನಿದ್ದೆ ಕಳೆದುಕೊಂಡರು. ಕಾರಂತರ ಆಸ್ತಿಯನ್ನು ಅನುಭವಿಸುತ್ತಿದ್ದ ಅವರಿಗೆ, ಈಗ ಆ ಆಸ್ತಿಗೆ ವಾರಸುದಾರನೊಬ್ಬ ಬಂದಿರುವುದನ್ನು ಅರಗಿಸಿಕೊಳ್ಳುವುದು ಕಷ್ಟವಾಯಿತು. ತಮ್ಮ ತಳಮಳವನ್ನು ಪ್ರಶ್ನೆಯ ಮೂಲಕ ದೇವಿಯ ಆರಾಧಕರಾದ ಭಟ್ಟರ ಎದುರು ಆನಂದಣ್ಣ ಇಟ್ಟಾಗ ಎದುರಾದ ಉತ್ತರ ಮತ್ತೂ ಆತಂಕ ಹುಟ್ಟು ಹಾಕುವಂತಿತ್ತು. ಸಂಜಯನ ಆಗಮನ ಊರಿಗೇ ಗಂಡಾಂತರಕಾರಿ ಆಗಲಿದೆ ಎನ್ನುವ ಭಟ್ಟರ ಮಾತಿಗೆ ಆನಂದಣ್ಣ ಕಂಗಾಲಾದ. ಇತ್ತ ಸಂಜಯ ತನ್ನ ಮೇಲಧಿಕಾರಿಗಳ ಅನುಮತಿ ಪಡೆದು ಎರಡು ತಿಂಗಳ ಕಾಲ ಊರಿನಲ್ಲೇ ಉಳಿಯಲು ನಿರ್ಧರಿಸಿದ. ಈವರೆಗೆ ತನ್ನ ಅನುಭವಕ್ಕೆ ಬರದ ಭೂತ ಪಿಶಾಚಿಗಳ ಭಯ ಮೊದಲ ಬಾರಿಗೆ ಸಂಜಯನನ್ನು ಕಾಡತೊಡಗಿತು.

'ಗುರಿಕಾರರೇ, ನೀವೇನೂ ಭಯಪಡಬೇಡಿ... ಈ ಹುಡುಗನಿಂದ ನಿಮಗೇನೂ ಭಯವಿಲ್ಲ. ಇವನಿಂದ ನಿಮಗೂ ಈ ಊರಿಗೂ ಬಹಳ ಒಳ್ಳೆಯದಾಗುತ್ತದೆ. ನೀವು ಯಾವುದಕ್ಕೂ ಹೆದರಬೇಡಿ. ನಿಮಗೆ ನನ್ನ ಸಂಪೂರ್ಣ ಆಶೀರ್ವಾದವೂ ಅಭಯವೂ ಇದೆ' ಎಂದಿತು.

ಸಂಜಯ್ ಒಮ್ಮೆ ನಿಟ್ಟುಸಿರು ಬಿಟ್ಟ. ಕೊನೆಗೂ ಮಾದ ತನ್ನ ಪರವಾಗೇ ಹೇಳಿದ ಅಂತ ಕಂಡಿತು ಅವನಿಗೆ. ಆಶಾಳ ಕಡೆಗೆ ತಿರುಗಿ 'ಆಶಾ, ನಮ್ಮ ಮಾದ ನನ್ನ ಬಗ್ಗೆ ಒಳ್ಳೆಯದೇ ಹೇಳಿದ' ಅಂದ.

ಅದಕ್ಕೆ ಆಶಾ 'ಹಾಗೆಲ್ಲಾ ಹೇಳಬೇಡಿ... ಭೂತ ಕಟ್ಟುವಾಗ ಮಾದ ಮಾದನಾಗಿ ಇರುವುದಿಲ್ಲ. ಅವನ ಬಾಯಲ್ಲಿ ಪಂಜುರ್ಲಿ ಹೇಳುತ್ತಿರುತ್ತದೆ' ಅಂದಳು.

ಅಷ್ಟರಲ್ಲಿ ಆನಂದಣ್ಣ ಅಲ್ಲಿಗೆ ಬಂದರು. ಅವರಿಗೆ ಪಂಜುರ್ಲಿಯ ಅಭಯ ಕೇಳಿ ಬಹಳ ಸಂತೋಷವೂ ನೆಮ್ಮದಿಯೂ ಆಗಿತ್ತು. ಬಂದವರೇ ಸಂಜಯನ ಕೈಹಿಡಿದು, 'ಬನ್ನಿ, ನೀವೂ ಪಂಜುರ್ಲಿಯ ಆಶೀರ್ವಾದ ತೆಗೆದುಕೊಳ್ಳಿ' ಎನ್ನುತ್ತಾ ಮುಂದಕ್ಕೆ ಕರೆದುಕೊಂಡು ಹೋದರು.

ಶೆಟ್ಟರು ಸಂಜಯನನ್ನು ಮೊದಲ ಬಾರಿಗೆ ನೋಡಿದರು. ಅವರ ದೃಷ್ಟಿ ಮೇಲಿಂದ ಕೆಳಗಿನವರೆಗೂ ಹೋಯಿತು. ಇದುರು ಬಂದ ಸಂಜಯನಿಗೆ ಪಂಜುರ್ಲಿ ಪ್ರಸಾದ ಕೊಟ್ಟು ಆಶೀರ್ವದಿಸಿತು. ಸಂಜಯ್ ಕೈಮುಗಿದ. ನಂತರ ಆನಂದಣ್ಣ ಸಂಜಯನನ್ನು ಶೆಟ್ಟರ ಕಡೆಗೆ ಕರಕೊಂಡು ಹೋದರು.

'ಶೆಟ್ರೇ, ಇವ್ರು ನೋಡಿ ನಮ್ಮ ಕಾರಂತರ ಮೊಮ್ಮಗ' ಹೇಳಿದರು.

ಶೆಟ್ಟರು ಏನೂ ಗೊತ್ತಿಲ್ಲದವರ ಹಾಗೆ ಮಾಡಿ 'ನೀವೇನೋ? ಸಂತೋಷ! ಆನಂದಣ್ಣ ನಿಮ್ಮ ಬಗ್ಗೆ ಬಾರೀ ಹೇಳಿದ್ದರು' ಅಂದ್ರು.

ಸಂಜಯ್ ಕೈಮುಗಿದ. ಆನಂದಣ್ಣ ಶೆಟ್ಟರ ಕಿವಿಯಲ್ಲಿ ಏನೋ ಹೇಳಿದರು.

ಶೆಟ್ಟರು 'ನೀವು ಬಂದದ್ದು ಬಹಳ ಸಂತೋಷ ಆಯಿತು. ನಿಮ್ಮನ್ನು ಭೇಟಿಯಾಗಬೇಕಿತ್ತು. ನಾಳೆ ಆನಂದಣ್ಣನೊಂದಿಗೆ ಭೇಟಿಯಾಗೋಣವೇ?' ಕೇಳಿದರು.

ಸಂಜಯನಿಗೆ ಇದು ಅರ್ಥ ಆಗಲಿಲ್ಲ. ಈಗಷ್ಟೇ ಸಂಜಯ್ ಬಗ್ಗೆ ಪ್ರಶ್ನೆ ಕೇಳುತ್ತಿದ್ದ ಈ ವ್ಯಕ್ತಿ ಈಗ ತನ್ನ ಭೇಟಿಗೆ ಕರೆಯುತ್ತಿದ್ದಾರೆ.

'ಆಯಿತು, ಭೇಟಿಯಾಗೋಣ' ಅಂದ ಸಂಜಯ್.

ಆಶಾ ಅಲ್ಲಿಗೆ ಬಂದಳು. ಶೆಟ್ಟರು ಕೈಮುಗಿದು 'ಆಶಾಮ್ಮ, ಬಹಳ ಸಂತೋಷ. ಶಾಸ್ತ್ರಿಗಳು ಚೆನ್ನಾಗಿದ್ದಾರೆ ತಾನೇ? ನಾನು ವಿಚಾರಿಸಿದೆ ಎಂದು ಹೇಳಿ' ಎನ್ನುತ್ತಾ ಅಲ್ಲಿದ್ದ ಹುಡುಗನಿಗೆ, 'ಎಳನೀರು ಕೊಟ್ಟೆಯೇನೋ?' ಎಂದು ಪ್ರಶ್ನಿಸಿದರು.

ಆಶಾ 'ಎಳನೀರು ಸಿಕ್ಕಿತು ಶೆಟ್ರೇ.. ಅಜ್ಜ ಚೆನ್ನಾಗಿದ್ದಾರೆ. ನಾವಿನ್ನು ಹೊರಡಲೇ?' ಎಂದು ಕೇಳಿದಳು. ಶೆಟ್ಟರು ಕೈಮುಗಿದರು. ಸಂಜಯನೂ ಕೈಮುಗಿದು ಆಶಾಳ ಹಿಂದೆ ಹೊರಟ.

ಮತ್ತದೇ ಗುಡ್ಡ ಹೊಲ, ಮತ್ತೆ ಗದ್ದೆಹುಣಿ ಇದಿರಾಯಿತು. ಆಶಾ ದೊಂದಿ ಹಿಡಿದು ಮುಂದೆ ಹೊರಟಳು. ಸಂಜಯ್ ಅವಳ ಹಿಂದೆ ಹೋಗತೊಡಗಿದ. ದಾರಿಯುದ್ದಕ್ಕೂ ಸಂಜಯನ ತಲೆಯಲ್ಲಿ ಹಲವಾರು ಸವಾಲು. ಈ ಶೆಟ್ಟರಿಗೆ ನನ್ನ ಬಗ್ಗೆ ಯಾಕೆ ಇಷ್ಟು ಕುತೂಹಲ? ನಾಳೆ ಏನು ಮಾತನಾಡಲಿದ್ದಾರೆ ಇತ್ಯಾದಿ. ಹಾಗೆಯೇ ಮಾದನ ಬಗ್ಗೆ ಬಹಳ ಖುಷಿಯೂ ಆಯಿತು — ಅವನು ತನ್ನ ಬಗ್ಗೆ ಒಳ್ಳೆಯದನ್ನೇ ಹೇಳಿದ್ದಕ್ಕಾಗಿ. ಮನೆ ಸೇರಿದವನೇ ಸಂಜಯ್ ಮಲಗಲು ಮುಂದಾದ.

ಮರುದಿನ ಬೆಳಗ್ಗೆ ಉಪಾಹಾರ ಮುಗಿಯುವ ಹೊತ್ತಿಗೆ ಆನಂದಣ್ಣ ಹಾಜರ್.

ಶಾಸ್ತ್ರಿಗಳಿಗೆ 'ನಮಸ್ಕಾರ ಶಾಸ್ತ್ರಿಗಳೇ' ಎಂದು ಕೈಮುಗಿದರು.

'ಓ ಆನಂದಣ್ಣ, ಇದೇನು ಬೆಳಗ್ಗೇ ಬಂದಿರಿ... ಎಲ್ಲಾ ಕ್ಷೇಮ ತಾನೇ?' ಶಾಸ್ತ್ರಿಗಳು ಕೇಳಿದರು.

'ಎಲ್ಲಾ ನಿಮ್ಮ ಕೃಪೆ ಶಾಸ್ತ್ರಿಗಳೇ, ನಾವೆಲ್ಲಾ ಕ್ಷೇಮ. ಅಂದಹಾಗೆ ನಿನ್ನೆ ಆಶಾಮ್ಮ ಮತ್ತು ಕಾರಂತರು ಶೆಟ್ಟರ ಮನೆಯ ಕೋಲಕ್ಕೆ ಬಂದಿದ್ದರು' ಅಂದರು.

'ಹೌದು, ನಾನೇ ಕಳಿಸಿದ್ದೆ. ಈ ಸಂಜಯ್ ಅಮೆರಿಕದವ. ಅವನಿಗೆ ಕೋಲ ನೋಡಿದ ಹಾಗೆ ಆಗ್ಲಿ ಅಂತ ಕಳುಹಿಸಿದೆ' ಅಂದರು.

'ಶೆಟ್ಟರಿಗೆ ಬಹಳ ಸಂತೋಷ ಆಯ್ತು. ಬಹಳ ಒಳ್ಳೆಯದು ಮಾಡಿದಿರಿ. ಅಂದಹಾಗೆ ಶೆಟ್ಟರಿಗೆ ಕಾರಂತರನ್ನು ಭೇಟಿಯಾಗಬೇಕು, ಮಾತಾಡ್ಬೇಕು ಅಂತ ಮನಸ್ಸಾಗಿದೆ. ಕಾರಂತರನ್ನು ಕರಕೊಂಡು ಬರ್ತೀರಾ ಅಂತ ಹೇಳಿದ್ರು' ಆನಂದಣ್ಣ ಹೇಳಿದರು.

'ಕರಕೊಂಡು ಹೋಗಿ ಆನಂದಣ್ಣ...' ಹೇಳಿದರು ಶಾಸ್ತ್ರಿಗಳು.

ಆನಂದಣ್ಣ ಸಂಜಯನ ಮುಖ ನೋಡಿದರು.

ಸಂಜಯ್ 'ಸರಿ, ಹೊರಡೋಣ ಆನಂದಣ್ಣಾ' ಅಂದ.

ಈ ಸಲ ಆನಂದಣ್ಣ ಸಂಜಯನನ್ನು ಸರಿಯಾದ ದಾರಿಯಲ್ಲೇ ಕರಕೊಂಡು ಹೋದರು. ದಾರಿಯುದ್ದಕ್ಕೂ ಶೆಟ್ಟರ ಗುಣಗಾನವನ್ನೂ ಅವರು ಹೇಗೆ ಊರಿಗೆ ಒಳ್ಳೆಯದು ಮಾಡಿಕೊಂಡಿದ್ದಾರೆ ಎಂಬುದನ್ನೂ ವಿವರಿಸಿದರು.

ಶೆಟ್ಟರು ಆನಂದಣ್ಣನನ್ನೂ ಸಂಜಯನನ್ನೂ ದೂರದಲ್ಲೇ ಬರುವುದು ನೋಡಿ ಅಂಗಳಕ್ಕಿಳಿದು ಕೈಮುಗಿಯುತ್ತಾ, 'ಬನ್ನಿ ಬನ್ನಿ' ಎಂದರು.

ಮನೆಯ ಜಗಲಿಯಲ್ಲಿ ಮೂರು ಕುರ್ಚಿ ಹಾಕಿ ತನ್ನ ಹೆಗಲಿನಲ್ಲಿದ್ದ ಟವೆಲ್‌ನಿಂದ ಕುರ್ಚಿಯ ದೂಳು ಹಾರಿಸುತ್ತ 'ಕೂತ್ಕೊಳ್ಳಿ' ಅಂದರು.

ಮನೆಯಲ್ಲಿದ್ದ ಆಳಿಯನಿಗೆ 'ಏ, ನಮ್ಮ ಕಾರಂತರಿಗೆ ಎಳನೀರು ತಾ' ಅಂದರು.

ಶೆಟ್ಟರ ಆಳಿಯ ಸಂಜಯನನ್ನು ಕಳ್ಳರ ಹಾಗೆ ಕಡೆಕಣ್ಣಲ್ಲಿ ನೋಡಿದ. ಓಡಿಹೋಗಿ ಮೂರು ಎಳನೀರು ತಂದು ಅವರ ಎದುರು ಇದ್ದ ಮೇಜಿನ ಮೇಲಿಟ್ಟು ಹಿಂತಿರುಗಿಯೂ ನೋಡದೆ ಆಚೆ ಹೋದ. ಶೆಟ್ಟರು ಎಳನೀರನ್ನು ಸಂಜಯನಿಗೆ ಕೊಟ್ಟರು.

ಸಂಜಯ್ 'ಈಗಷ್ಟೇ ಉಪಾಹಾರ ಆಗಿದೆ, ಬೇಡ ಇತ್ತು' ಅಂದ.

ಆನಂದಣ್ಣ 'ಕಾರಂತರೇ, ಬೇಡ ಎನ್ನಬೇಡಿ, ಇದು ನಿಮ್ಮ ಹಿರಿಯರ ಭೂಮಿಯಲ್ಲೇ ಆದ ಎಳನೀರು' ಅಂದರು. ಸಂಜಯ್ ಕುಡಿದ.

ಶೆಟ್ಟರು ಗಂಟಲು ಸರಿಮಾಡಿಕೊಂಡರು. 'ಕಾರಂತರೇ, ನಿಮ್ಮನ್ನು ನೋಡಿ ಬಹಳ ಸಂತೋಷ ಆಯಿತು. ನಿಮ್ಮ ಅಪ್ಪ ಮತ್ತು ನಾನು ಒಂದೇ ಪ್ರಾಯದವರು. ನಾವು ಒಟ್ಟಿಗೇ ಬೆಳೆದವರು. ನಿಮ್ಮ ಅಪ್ಪ ಓದುವುದರಲ್ಲಿ ಬಹಳ ಹುಷಾರು. ಹಾಗೇ ಓದುತ್ತಾ ಮುಂಬೈಗೆ ಹೋದರು. ನಾನು ಇಲ್ಲೇ ಉಳಿದೆ. ನಂತರ ಅಮೆರಿಕಕ್ಕೆ ಹೋಗಿದ್ದಾರೆ ಅಂತ ಕೇಳಿದೆ. ಅಲ್ಲಿ ಏನೋ ಆಯಿತು ಅಂತ ಕೇಳಿದೆ' ಎನ್ನುತ್ತಾ ಸಂತಾಪ ಸೂಚಿಸಿದರು.

ಸಂಜಯ್ ಅಪ್ಪನ ಬಗ್ಗೆ ಹೇಳಿದ. ಒಂದು ಕ್ಷಣ ಮೂವರೂ ಮೌನವಾದರು.